ಹೋಗುತ್ತೀರಲ್ಲ, ಆಹಾರವಿಲ್ಲದೆ ನಾನು ಬದುಕುವುದಾದರೂ ಹೇಗೆ ಎಂದು ಯೋಚಿಸಿದ್ದೀರಾ?' ಎಂದು ಕೇಳಿದಳು ಹೆಂಡತಿ.

'ನನಗೆ ಅದರ ಬಗ್ಗೆ ಯೋಚಿಸುವ ಅಗತ್ಯವೇ ಇಲ್ಲ. ಒಟ್ಟಿನಲ್ಲಿ ನಾನು ದುಡಿದು ತಂದುದನ್ನು ನೀನು ಉಣಬಾರದು ಅಷ್ಟೇ. ಇಷ್ಟು ದಿನ ನನ್ನ ಸಂಪತ್ತನ್ನು ಕರಗಿಸಿದ ತಪ್ಪಿಗೆ ನೀನು ನನಗಿನ್ನು ಹೆಂಡತಿಯಾಗಿರಲು ಯೋಗ್ಯಳಲ್ಲ. ಈಗಾಲೇ ನಿನ್ನ ತವರಿಗೆ ಹೋಗಿಬಿಡು' ಎಂದು ವ್ಯಾಪಾರಿ ಹೆಂಡತಿಯನ್ನು ಹೊಡೆದು ಮನೆಯಿಂದ ಹೊರಗೆ ಅಟ್ಟಿದ. ಆದರೆ ಅವನಿಗೆ ಅಡುಗೆ ಮಾಡುವ ವಿದ್ಯೆ ಗೊತ್ತಿರಲಿಲ್ಲ. ಬೇಯಿಸಿ ಹಾಕಲು ಒಬ್ಬ ಹೆಂಡತಿ ಬೇಕೇ ಬೇಕು. ಅದನ್ನು ಕೇಳಲು ದೇವರನ್ನು ಹುಡುಕಿಕೊಂಡು ಹೋದ. ಒಂದೆಡೆ ದೇವರು ಕಾಣಲು ಸಿಕ್ಕಿದ. ಅವನೊಂದಿಗೆ ತನಗೊಬ್ಬಳು ಅನುಕೂಲಳಾದ ಹೆಂಡತಿಯನ್ನು ದಯಪಾಲಿಸುವಂತೆ ಬೇಡಿದ.

'ನಿನಗೆಂತಹ ಹೆಂಡತಿ ಬೇಕು? ಮಲ್ಲಿಗೆ ಹೂವಿನಂತೆ ಮೃದುವಾದವಳೆ, ಹುಣ್ಣಿಮೆಯ ಚಂದ್ರನಂತೆ ಬೆಳ್ಳಗಿರುವವಳೆ, ನಕ್ಕರೆ ಮುತ್ತು ಉದುರುವವಳೆ. ಯಾರು ಬೇಕು?' ದೇವರು ಕೇಳಿದ.

'ಅಯ್ಯೋ ದೇವರೇ, ಇಂಥವರನ್ನೆಲ್ಲ ಕಟ್ಟಿಕೊಂಡು ನಾನು ಮಾಡಲಿಕ್ಕೇನಿದೆ? ನನಗೆ ಅಂದಗಾತಿಯರು ಬೇಡ. ಆದರೆ ಮುಖದಲ್ಲಿ ಬಾಯಿಯೇ ಇಲ್ಲದ ಒಬ್ಬಳನ್ನು ನನ್ನ ಹೆಂಡತಿಯಾಗಿ ಅನುಗ್ರಹಿಸು' ಎಂದು ವ್ಯಾಪಾರಿ ಕೇಳಿಕೊಂಡ. ದೇವರಿಗೆ ಅಚ್ಚರಿಯಾಯಿತು. 'ಮುಖದಲ್ಲಿ ಬಾಯಿ ಇಲ್ಲದ ಹೆಂಡತಿ ಬೇಕೆ? ವಿಚಿತ್ರವಾಗಿದೆಯಲ್ಲವೆ ನಿನ್ನ ಕೋರಿಕೆ' ಎಂದು ನಕ್ಕುಬಿಟ್ಟ.

'ಹೌದು ದೇವರೇ, ನನಗೆ ಇಂತಹ ಹೆಂಡತಿಯೇ ಬೇಕು. ಅವಳು ನನಗೆ ವಿಧ ವಿಧದ ಪಕ್ವಾನ್ನಗಳನ್ನು ತಯಾರಿಸಿ ಬಡಿಸಬೇಕು. ನಾನು ಕಂಠಪೂರ್ತಿ ತಿನ್ನಬೇಕು. ಆದರೆ ನಾನು ದುಡಿದುದನ್ನು ನಾನೊಬ್ಬನೇ ತಿನ್ನಬೇಕು. ಅವಳು ತಿನ್ನಬಾರದು. ಮುಖದಲ್ಲಿ ಬಾಯಿಯೇ ಇಲ್ಲದಿದ್ದರೆ ತಿನ್ನುವುದಾದರೂ ಸಾಧ್ಯವೇ? ಇಂತಹ ಹೆಂಡತಿಯೇ ನನಗೆ ಯೋಗ್ಯವಾದವಳು' ಎಂದು ವಿಚಿತ್ರವಾದ ಬೇಡಿಕೆ ಸಲ್ಲಿಸಿದ ವ್ಯಾಪಾರಿ.

'ಹಾಗೆಯೇ ಆಗಲಿ, ನಾಳೆ ಬೆಳಗಾಗುವಾಗ ನೀನು ಬಯಸಿದಂತಹ ಮುಖದಲ್ಲಿ ಬಾಯಿ ಇಲ್ಲದ ಹೊಸ ಹೆಂಡತಿ ನಿನ್ನ ಮನೆಗೇ ಬರುತ್ತಾಳೆ' ಎಂದು ದೇವರು ಹೇಳಿದ. ವ್ಯಾಪಾರಿ ಸಂತೋಷದಿಂದ ಮನೆಗೆ ಬಂದ. ನೆಮ್ಮದಿಯಿಂದ ನಿದ್ರೆ ಮಾಡಿದ. ಬೆಳಗಾಯಿತು. ದೇವರು ಹೇಳಿದ ಮಾತಿನಂತೆಯೇ ನಡೆದುಕೊಂಡಿದ್ದ. ಹೆಂಡತಿಯೊಬ್ಬಳು ಬಂದಿದ್ದಳು. ಅವಳಿಗೆ ಅವನು ಬೇಡಿಕೊಂಡಂತೆ ಮುಖದಲ್ಲಿ ಬಾಯಿ ಇರಲಿಲ್ಲ. ಇದನ್ನು ನೋಡಿ ವ್ಯಾಪಾರಿಯ ಸಂತಸಕ್ಕೆ ಪಾರವೇ ಇರಲಿಲ್ಲ. ಅವಳ ಕೈ ಹಿಡಿದು ಪಾಕಶಾಲೆಗೆ ಕರೆದುಕೊಂಡು ಹೋದ. ಅಕ್ಕಿ, ರಾಗಿ ಮುಂತಾದ ಕಾಳುಗಳು, ಬೇಳೆಗಳು, ಕಾಯಿ ಪಲ್ಲೆಗಳು ತುಂಬಿದ್ದ ಚೀಲಗಳನ್ನು ಅವಳಿಗೆ ತೋರಿಸಿದ. ಆ ದಿನ ಏನೆಲ್ಲ ಖಾದ್ಯಗಳು ತಯಾರಾಗಬೇಕೆಂಬುದನ್ನು ವಿವರವಾಗಿ ಹೇಳಿದ. ಕ್ಷಣಾರ್ಧದಲ್ಲಿ ಅವಳು ಘಮಘಮಿಸುವ ಅಡುಗೆಯನ್ನು ತಯಾರಿಸಿದಳು. ಎಲ್ಲ ಪಾತ್ರೆಗಳನ್ನೂ ವ್ಯಾಪಾರಿ ತಾನೊಬ್ಬನೇ ಖಾಲಿ ಮಾಡಿದ. ಹೆಂಡತಿಯ ಕಡೆಗೆ ತಿರುಗಿಯೂ ನೋಡದೆ ಅಂಗಡಿಗೆ ಹೊರಟು ಹೋದ.

ಮರುದಿನ ಅಡುಗೆ ಮಾಡುವಂತೆ ಹೇಳಲು ವ್ಯಾಪಾರಿ ಒಳಗೆ ಹೋದಾಗ ಹೌಹಾರಿಬಿಟ್ಟ. ದಿನಸಿಗಳು ತುಂಬಿದ್ದ ಚೀಲಗಳೆಲ್ಲ ಖಾಲಿಯಾಗಿದ್ದವು. ತಾನು ನಿನ್ನೆ ಊಟ ಮುಗಿಸಿದಾಗ ಚೀಲಗಳಲ್ಲಿ ಸಾಕಷ್ಟು ಪದಾರ್ಥಗಳಿದ್ದುದನ್ನು ಅವನು ನೋಡಿದ್ದ. ಹೆಂಡತಿಗೆ ಬಾಯಿಯೇ ಇಲ್ಲ. ಅವಳು ಮುಗಿಸಲು ಸಾಧ್ಯವಿಲ್ಲ. ಇದರ ಗುಟ್ಟು ತಿಳಿಯಬೇಕೆಂದು ಯೋಚಿಸಿದ. ಮತ್ತೆ ಬೇಳೆ ಕಾಳುಗಳನ್ನು ತಂದು ಅಡುಗೆ ಮಾಡಿಸಿ ಊಟ ಮುಗಿಸಿದ. ಅಂಗಡಿಗೆ ಹೋಗುವುದಾಗಿ ಹೇಳಿ ಅಟ್ಟವೇರಿ ಕುಳಿತ. ಹೆಂಡತಿ ಮತ್ತೆ ಪಾತ್ರೆಗಳ ತುಂಬ ಖಾದ್ಯಗಳನ್ನು ತಯಾರಿಸಿದಳು. ಅವಳ ಮುಖದಲ್ಲಿ ಬಾಯಿಯಿಲ್ಲದಿದ್ದರೂ ತೋಳಿನ ಪಕ್ಕದಲ್ಲಿ ದೇವರು ದೊಡ್ಡ ಬಾಯಿಯನ್ನಿರಿಸಿದ್ದ. ಬೇಯಿಸಿದ ಆಹಾರವನ್ನು ಅಲ್ಲಿರುವ ಬಾಯಿಯ ಮೂಲಕ ಅವಳು ಉಂಡು ಮುಗಿಸಿದಳು. ಇದನ್ನು ನೋಡಿ ವ್ಯಾಪಾರಿಗೆ ತಾಳಲಾಗದ ಕೋಪ ಬಂತು. ಅಟ್ಟದಿಂದ ಕೆಳಗಿಳಿದ. ಹೆಂಡತಿಯ ಕೈ ಹಿಡಿದೆಳೆಯುತ್ತ ದೇವರ ಬಳಿಗೆ ಹೋದ.

'ದೇವರೆ ನೀನು ಇಂಥ ವಿಶ್ವಾಸ ದ್ರೋಹ ಮಾಡುವುದೇ? ಹೆಂಡತಿಗೆ ಬಾಯಿ ಇದ್ದರೆ ನಾನು ದುಡಿದುದನ್ನೆಲ್ಲ ತಿಂದು ಮುಗಿಸುತ್ತಾಳೆಂದು ಬಾಯಿಯಿಲ್ಲದ ಹೆಂಡತಿಯನ್ನು ಕೇಳಿದ್ದೆ. ಆದರೆ ಇವಳಿಗೆ ತೋಳಿನಲ್ಲಿ ಬಾಯಿಯನ್ನಿರಿಸಿ ಎಲ್ಲವನ್ನೂ ನುಂಗುವಂತೆ ಮಾಡಿದ್ದೀಯಲ್ಲ ನಿನಗೆ ಬುದ್ಧಿ ಇದೆಯೇ?' ಎಂದು ಕೋಪದಿಂದ ಕುದಿಯುತ್ತ ಕೇಳಿದ ವ್ಯಾಪಾರಿ.

ದೇವರು, 'ನಿನಗೆ ಅಡುಗೆ ಮಾಡಲು ಹೆಂಡತಿ ಬೇಕು ಅಲ್ಲವೆ? ನಿನ್ನಂತಹ ಜಿಪುಣ ಮನುಷ್ಯನಾಗಿರಲು ಯೋಗ್ಯನಲ್ಲ. ನೀನೊಂದು ಹೆಬ್ಬಾವು ಆಗು, ನಿನಗೆ ಆರು ತಿಂಗಳಿಗೆ ಒಮ್ಮೆ ಮಾತ್ರ ಆಹಾರ ತಿನ್ನಲು ಸಾಧ್ಯವಾಗುತ್ತದೆ' ಎಂದು ಹೇಳಿ ವ್ಯಾಪಾರಿಯನ್ನು ಒಂದು ಹೆಬ್ಬಾವಾಗಿ ಮಾರ್ಪಡಿಸಿದ.

(ಆಫ್ರಿಕದ ಕತೆ)

**-ಲಕ್ಷ್ಮೀ ತಿಮ್ಮಪ್ಪ, ಶಿವಮೊಗ್ಗ**

## ಬಣ್ಣಗಳ ಜಗಳ

ಏಳು ಬಣ್ಣ ಸೇರಿದವು
ದುಂಡು ಮೇಜಿನ ಸಭೆಯಲ್ಲಿ
ಮಾತಿಗೆ ಮಾತು ಬೆಳೆದು
ಜಗಳವು ಆಯಿತು ಅವರಲ್ಲಿ

ಹೊಳೆಯುವ ನಾನೇ ಹಿರಿಯ
ಎಂದಿತು ಹಳದಿ ಬಣ್ಣ
ಅಂದಿತು ಹಸಿರು ಆಗ
ಶುಭವ ತರುವ ನಾನೇ ಹಿರಿಯಣ್ಣ

ಶಾಲಾ ಮಕ್ಕಳ ವಸ್ತ್ರಕ್ಕೆ
ನಾನೇ ಕಾರಣ ಅನ್ನಲು ನೀಲಿ
ಕೇಸರಿ ನಾನೇ ಇರುವೆ ಮೊದಲು
ಅಂದಿತು ದೇಶದ ಧ್ವಜದಲ್ಲಿ

ವಾಹನ ನಿಲ್ಲಲು ನಾನೇ ಸೂಚನೆ
ಅಂದಿತು ಕೆಂಪು ಬಣ್ಣವು
ಬೆಳಕು ಹಿಂದಕೆ ಹೋಗಲು
ನಾನೇ ಬೇಕು ಅಂದಿತು ಕಪ್ಪು ಬಣ್ಣವು

ದುಂಡು ಮೇಜಿನ ಸುತ್ತ
ಎಲ್ಲವೂ ಸುತ್ತುತಲಿತ್ತು
ಬಿಳಿಯ ಬಣ್ಣವು ಬಂದಾಗ
ಅವರ ಜಗಳವು ನಿಂತಿತ್ತು

**-ಶಿವನಾಪುರ ನರಸಿಂಹಮೂರ್ತಿ, ಬೆಂಗಳೂರು**

